ವಿಜಯದ ಮಹಾನಂದೂ ನದಿ, ದಟ್ಟ ಮಂಜಿನೊಳಗಿಂದ ಹರಿದು ಬರುತ್ತಿದೆ.

ಸಂಜೆ ಮೊತಿಜಾನ್ ನೀರಿನ ಗುಂಡಿಯ ಪಕ್ಕದ ಬಿದಿರು ತೋಪಿಗೆ ಬಂದಳು. ಜಾಗ ನಿರ್ಮಾನುಷವಾಗಿತ್ತು. ದಟ್ಟ ನೆರಳು ಆವರಿಸಿಕೊಂಡಿತ್ತು. ಒದ್ದೆ ಒದ್ದೆಯಾಗಿದ್ದ ನೆಲ, ಮೃದುವಾಗಿ ತಂಪಾಗಿತ್ತು. ಗುಲ್ನೂರ್ ಪ್ರಾಯಶಃ ಮಲಗಿರಬೇಕು. ಏನೂ ಸದ್ದಿಲ್ಲ. ಬಿದಿರು ಬುಡದ ಕೆಳಗೆ ಕೂತು ಹಾಡೊಂದನ್ನು ಗುನುಗುತ್ತಿದ್ದಳು ಮೊತಿಜಾನ್. ಮದುವೆಯಾದ ಮೇಲೆ ಇದೇ ಮೊದಲನೆ ಸಲ ಅವಳಿಗೆ ಖುಷಿಯಾಯ್ತು. ನೀರಿನ ಗುಂಡಿಯ ಆಚೆಕಡೆಗೆ ಎರಡು ಹಸುಕರುಗಳನ್ನು ಕಟ್ಟಿದ್ದರು. ಹಸುಗಳನ್ನು ಮೇಯಿಸಲು ಅಟ್ಟಿಕೊಂಡು ಹೋಗಿದ್ದ ಬುಧೇ, ಬಹಳ ಚಟುವಟಿಕೆಯ ಹುಡುಗ, ಒಂದು ನಿಮಿಷಾನೂ ಸುಮ್ನೆ ಕೂತ್ಕೊಳೊಕೆ ಆಗಲ್ಲ ಅವನಿಗೆ, ಆಗಾಗ್ಗೆ ಮೊತಿಜಾನಳನ್ನು ಕೇಳ್ತಾನೆ,

'ಒಂದು ಕತೆ ಹೇಳು ಭಾಬಿ.'

'ಯಾವ ಕತೆ? ರಾಜಂದು?'

ಬುಧೇ ತಲೆಯಾಡಸ್ತಾನೆ. ಅವನಿಗೆ ರಾಜನ ಕತೆ ಹೇಳ್ತಾಳೆ. ಏಳು ಸಮುದ್ರ, ಏಳು ಪರ್ವತದಾಚೆಗಿನ ಕತೆ ಹೇಳ್ತಾಳೆ ಅವಳು. ಅದನ್ನ ಕೇಳ್ತಾ ಕೇಳ್ತಾ ಹನ್ನೆರಡು ವರ್ಷದ ಬುಧೇ ಕಣ್ಣುಗಳು ಕುತೂಹಲದಿಂದ ವಿಶಾಲವಾಗ್ತವೆ. ಇವತ್ತು ಯಾಕೋ ಅವಳ ಎದೆ ತುಂಬಾ ರಾಜರ ಕತೆಗಳೆ ತುಂಬಿಕೊಂಡಿವೆ. ಅವಳೇ ಸ್ವತಃ ಏಳು ಸಮುದ್ರ ದಾಟಿ ಹೋಗ್ತಾಯಿದಾಳೆ. ಬುಧೇಗೆ ಈ ಕತೆ ಹೇಳಬೇಕು ಅಂತ ತುಂಬಾ ಆಸೆಯಾಗ್ತಾಯಿದೆ. ಅವಳು ಬಿದಿರು ಮೆಳೆ ದಾಟಿ ಮನೆಯ ಹತ್ತಿರ ಬರುತ್ತಿದ್ದಂತೆಯೇ ಲೋಕಮಾನ್ ಎದುರಾದ.

ಅವಳನ್ನ ನೋಡಿ ಅವನು ನಸುನಕ್ಕ. ಅವನು ಈ ಹಿಂದೆ ಎಷ್ಟೊಂದು ಸಲ ಮನೆಗೆ ಬಂದಿದ್ದ. ಅಬೂಲನ ಗೆಳೆಯ. ಅಬೂಲ್ ತುಂಬಾ ದಿನಗಳು ಮನೆಗೆ ಬರದೆಯಿದ್ರೆ, ಮನೆ ಸಾಮಾನನ್ನ ಲೋಕಮಾನ್ ಕೈಲಿ ಕಳಿಸಿರುತ್ತಾನೆ. ಲೋಕಮಾನ್ ದಿನವೂ ಕೆಲಸಕ್ಕಾಗಿ ಪೇಟೆ ಹತ್ತಿರ ಹೋಗ್ತಾನೆ. ಅವನ ಜೊತೆ ಮಾತಾಡೋಕೆ ಅವಕಾಶನೇ ಆಗಿರಲಿಲ್ಲ, ಧೈರ್ಯವೂ ಇರಲಿಲ್ಲ. ಇವತ್ತು ಅವಳನ್ನು ನೋಡಿ ಅವಾಕ್ಕಾದ.

'ಭಾಬಿ, ಹೇಗಿದಿರಿ?'

'ಚೆನ್ನಾಗಿದಿನಿ.' ಸಹಜವಾಗಿ ನಕ್ಕಳು. ಅವನು ಆಶ್ಚರ್ಯಗೊಂಡ, ಅವಳು ನಕ್ಕರೆ ಮುತ್ತು ಸುರಿಯುವಂತಿದೆ.

'ತಗೊಳಿ ನಿಮ್ಮನೆ ಸಾಮಾನು.'

ಅವಳು ಕೈಚಾಚಿ ಸಾಮಾನು ಈಸ್ಕೊಂಡಳು, 'ಬನ್ನಿ, ಜಗಲಿ ಮೇಲೆ ಕೂತ್ಕೊಳೋಣ. ಎಲೆಅಡಿಕೆ ಹಾಕ್ಕೋತೀರಾ?' ಅವನನ್ನ ಆಹ್ವಾನಿಸಿದಳು.

ಮಾತಾಡಿದರೆ ಸಂಗೀತ ನುಡಿದಂತೆ. ಲೋಕಮಾನ್‌ಗೆ ಬಹಳ ಆಶ್ಚರ್ಯವಾಯಿತು. ಎರಡು ನಿಮಿಷ ಕೂತ್ಕೋಬೇಕು ಅಂತ ಆಸೆಯಾಯ್ತು. ಆದರೆ, ಹಿಂಜರಿಯುತ್ತಾ ಹೇಳಿದ, 'ಇವತ್ತು ಬೇಡ'.

'ಮತ್ತೆ ಬರ್ತೀರಿ ತಾನೆ?'

'ಬರ್ತೀನಿ, ಬರ್ತೀನಿ' ಕಣ್ಣರಳಿಸುತ್ತಾ ಲೋಕಮಾನ್ ನುಡಿದ.

ಮೊತಿಜಾನ್ ತಲೆಯಲ್ಲಾಡಿಸಿ ಎಂದಿನಂತೆ ನಡೆದು ಮನೆಯೊಳಗೆ ಬಂದಳು. ಅವಳ ನಡಿಗೆಗೊಂದು ಲಯ ಸೇರಿಕೊಂಡಿತ್ತು. ಲೋಕಮಾನ್ ಆಶ್ಚರ್ಯಗೊಂಡ. ಅಷ್ಟು ದಿನದಿಂದ ನೋಡ್ತಾಯಿದ್ದ, ಇವಳು ಹೀಗೆ ಇದ್ಲಾ? ಅವನ ಅನುಮಾನ ಪರಿಹಾರವಾಗಲು ಸ್ವಲ್ಪ ಸಮಯ ಹಿಡೀತು.

ಸಾಮಾನುಗಳನ್ನು ಜಗಲಿಯಲ್ಲಿಟ್ಟು ಬಹಳ ಉದಾಸೀನಳಾಗಿ ಕೂತಳು ಮೊತಿಜಾನ್. ಗುಲ್ನೂರ್ ನಿದ್ದೆಯಿಂದೆದ್ದ ಮೇಲೆ ಸಾಮಾನುಗಳನ್ನು ಬಿಚ್ಚಿ ನೋಡ್ತಾಳೆ. ಮೊತಿಜಾನ್ ಸಾಮಾನು ಬಿಚ್ಚುವ